

ಹರಡಿದ ಕಾಡಿನಂಚಿಗೆ ಕರೆದುಕೊಂಡು ಹೋಗುತ್ತಿದ್ದ. ನಿಶಾಚರಿಗಳಾಗಿ ಅಲೆಯುವ ಗೂಬೆಗಳು, ನೈಟ್ ಜಾರ್, ಹಕ್ಕಿಗಳಿಗಾಗಿ ನಾವಲ್ಲಿ ಹೊಂಚು ಹಾಕುತ್ತಿದ್ದೆವು.

ಹಗಲಲ್ಲಿ ಗಿರೀಶ್ ಕಾಡಿನ ನಡುವೆ ಅನೇಕ ಹಕ್ಕಿಗಳ ಕೂಗನ್ನು ಅನುಕರಿಸುತ್ತಿದ್ದ. ಅವನ ದನಿಗೆ ಪಕ್ಷಿಗಳು ಮರು ಉತ್ತರ ಕೊಡುತ್ತಿದ್ದವು. ಈತ ಪಕ್ಷಿಗಳ ಕೂಗಿನಲ್ಲಿ ಎಷ್ಟು ನಿಖರ ಎಂದರೆ ಹಕ್ಕಿಗಳಿಗೆ ಕೊಂಚವೂ ಸಂದೇಹ ಬರುತ್ತಿರಲಿಲ್ಲ. ಅಷ್ಟು ಸ್ಪಷ್ಟವಾಗಿ ಖಗಗಳ ಧ್ವನಿಯನ್ನು ಅಭ್ಯಾಸ ಮಾಡಿಕೊಂಡಿದ್ದ. ಲಾಯರ್ ಆಗಿರುವ ಇವನಿಗೆ ಇದೊಂದು ಹವ್ಯಾಸಿ ಉದ್ಯೋಗ. ಚೀನಾ ದೇಶದಿಂದ ಬರುವ ಬ್ಯಾಗ್ ಬಾಝು, ಡಾಲರ್ ಬರ್ಡ್‌ಗಳನ್ನು ಇವನು ನಮಗೆ ವಿಶೇಷವಾಗಿ ತೋರಿಸಿದ. ಇವು ಸಂಕೋಚದ ಹಕ್ಕಿಗಳಾಗಿದ್ದವು. ಎತ್ತರದ ಮರದ ಮೇಲೆ ಕೂರುವ ಇವು ಕೆಳಗೆ ಇಳಿಯುವ ಯಾವ ಛಾನ್ಸೂ ಇರಲಿಲ್ಲ. ಹೀಗಾಗಿ ಅವುಗಳ ಚಿತ್ರ ತೆಗೆಯುವ ಆಸೆಯನ್ನೇ ಕೈ ಬಿಟ್ಟೆವು. ನಮ್ಮ ಉದ್ದದ ಲೆನ್ಸುಗಳಲ್ಲೂ ಅವು ಚುಕ್ಕೆ ಚಿತ್ರವಾಗಿ ಮೂಡಿ ವೈರಾಗ್ಯ ಹುಟ್ಟಿಸಿದವು. ಪ್ರತಿ ಪಟಗಾರನು ಹಕ್ಕಿ ಸೊಗಸಾಗಿ ತೀರಾ ಹತ್ತಿರದಲ್ಲಿ ಸಿಗಬೇಕೆಂದು ಬಯಸುತ್ತಾನೆ. ಹಕ್ಕಿಯ ಬಣ್ಣ, ಅದರ ರೆಕ್ಕೆಯ ವಿವರಗಳು ಸ್ಫುಟವಾಗಿ ಬರಬೇಕೆಂದು ಆಸೆ ಪಡುತ್ತಾನೆ. ಆದರೆ ನಮ್ಮ ಈ ದುರಾಸೆಗೆ ಅನೇಕ ಹಕ್ಕಿಗಳು ಸೊಪ್ಪೇ ಹಾಕುವುದಿಲ್ಲ. ಅದರಲ್ಲೂ ವಲಸೆ ಬಂದ ಹಕ್ಕಿಗಳು ಊಹ್ಞೂ ಸಾಧ್ಯವೇ ಇಲ್ಲ. ಸಂಕೋಚದ ಈ ಜೀವಗಳು ಮನುಷ್ಯರ ಒಡನಾಟ ಮತ್ತು ಸಾಮೀಪ್ಯದಿಂದ ಆದಷ್ಟು ದೂರವಿರಲು ಇಚ್ಛಿಸುತ್ತವೆ.

ಕ್ಯಾಮೆರಾಗೆ ಖುಷಿಯಾಗುವ ಯಾವ ಹಕ್ಕಿಗಳನ್ನೂ ಗಿರೀಶ್ ಹಿಡಿದುಕೊಡಲಿಲ್ಲ. ಶ್ರೀಲಂಕನ್ ಫ್ರಾಗ್ ಮೌತ್ ಹಾಗೂ ಒಂದೆರಡು ಗೂಬೆಯ ಚಿತ್ರಗಳು ಮಾತ್ರ ಎರಡು ದಿನಗಳ ಪಯಣದಲ್ಲಿ ದಕ್ಕಿದವು. ಆದರೆ ಅವನ ಜೊತೆ ಕಾಡಲೆದು, ಹಕ್ಕಿಗಳ ಮಧುರ ದನಿ ಕೇಳಿ ಮನಸ್ಸಂತೂ ಹಗುರವಾಯಿತು. ಎಲ್ಲಾ ಹಕ್ಕಿಗಳೂ ಪಟವಾಗೇ ತೀರಬೇಕೆಂಬ ಹಟವಿರಬಾರದು. ಕಷ್ಟಪಟ್ಟು ತಿಣುಕಾಡಿ, ಹಕ್ಕಿಯ ಒಂದು ನೋಟ ಸಿಕ್ಕರೂ, ಅದರ ಆಟ-ಊಟಗಳು ಕಂಡರೂ ಅದೂ ಕೂಡ ಅದೃಷ್ಟವೇ. ಪಕ್ಷಿಗಳ ನಲಿದಾಟ ನೋಡುತ್ತಾ ಕೂತರೆ, ಅವುಗಳ ಚಿಲಿಪಿಲಿ ದನಿ ಕಿವಿಗೆ ಬಿದ್ದರೆ ಹೃದಯದಲ್ಲಾಗುವ ಪರಿವರ್ತನೆ, ಮನಸ್ಸಿಗಾಗುವ ಆಹ್ಲಾದ ವಿವರಿಸಲಾಗದ್ದು. ಎಲ್ಲ ಮರೆತು ಧ್ಯಾನದ ಸ್ಥಿತಿಗೆ ಹೋಗಬಲ್ಲ ಫೋಟೊಗ್ರಫಿ ಒಂದು ತಪಸ್ಸು ಎಂದರೂ ತಪ್ಪಿಲ್ಲ.

●